ಲೇಖನ 05

# 'ಪಕ್ಷಿ ಗ್ರಾಮ'ದಲ್ಲಿ ಎಲ್ಲರಿಗೂ ಚಿರಪರಿಚಿತ ಕೇಸರಿ ಕುತ್ತಿಗೆಯ ಹಸಿರು ಪಾರಿವಾಳ

ಅದು 2016ರ ನವೆಂಬರ್ ಹನ್ನೆರಡು. ಭಾರತದ ಪಕ್ಷಿ ಮಾನವರಾದ ಡಾ. ಸಲೀಂ ಆಲಿ ಅವರ ಜನ್ಮದಿನದಂದು ಮೊದಲ ಬಾರಿಗೆ ಕಿದೂರು ಗ್ರಾಮದಲ್ಲಿ ಪಕ್ಷಿ ನಿರೀಕ್ಷಣೆ ನಡೆದಿತ್ತು. ಒಣಗಿದ ಮುಳಿ ಹುಲ್ಲುಗಳೆಡೆಯಲ್ಲಿ ಪಾರೆಗಳಿಂದಾವೃತ ಪ್ರದೇಶದಲ್ಲಿ ನಡಿಗೆ ಆರಂಭವಾಗಿತ್ತು. ಪ್ರಾಕೃತಿಕ ಹಳ್ಳಗಳಿಂದ ಕೂಡಿದ, ಕಾಡು ಹಣ್ಣುಗಳಿಂದ ಸಮೃದ್ಧವಾಗಿದ್ದ, ಗದ್ದೆ, ಬಯಲು, ತೋಡು, ತೋಟ ಮತ್ತು ಶಿರಿಯ ನದಿಯಿಂದ ಶ್ರೀಮಂತವಾಗಿದ್ದ ಪ್ರದೇಶವದು. ಕ್ಯಾಮರಾ ಇಲ್ಲದ ಕೈಗಳಲ್ಲಿ ಹಳೆಯ ಮೋಡೆಲಿನ ಸಾಮಾನ್ಯ ದರ್ಜೆಯ ಬೈನಾಕ್ಯುಲರ್ ಮಾತ್ರವೇ ಜೊತೆಗಿತ್ತು.

ಒಂದೂಕಾಲು ಕಿಲೋ ಮೀಟರ್ ನಡಿಗೆ ಮುಗಿಸಿ ನಿರೀಕ್ಷಣೆ ಮುಂದುವರಿದಿತ್ತು. ಹೂ-ಹಣ್ಣುಗಳಿಲ್ಲದ ಅರ್ಧ ಒಣಗಿದ ಅಕೇಶಿಯಾ ಮರದಲ್ಲಿ ಎರಡು ಪಾರಿವಾಳಗಳು ಕಂಡು ಬರಲು ಬೈನಾಕ್ಯುಲರ್ ಅತ್ಯಂತ ಸೂಕ್ಷ್ಮವಾಗಿ ಗಮನಿಸಲು ಆರಂಭಿಸಿತು.

ನೋಡುವುದೇನು..? ಅಂತಹ ಸುಂದರ ಪಾರಿವಾಳಗಳು ಇಲ್ಲಿಯವರೆಗೂ ಕಾಸರಗೋಡು ಜಿಲ್ಲೆಯಲ್ಲಿ ಕಂಡುಬರಲಿಲ್ಲ. ದಟ್ಟಾರಣ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ ಎಂದು ಎಲ್ಲಿಯೋ ಓದಿದ ನೆನಪು ಬರಲಾರಂಭಿಸಿತು. ಹಸಿರು ಪಾರಿವಾಳವೊಂದರಿಂದ ಕೇಸರಿ ಕುತ್ತಿಗೆ ಹೊಳೆಯುತ್ತಿರುವುದನ್ನು ಕಂಡಾಗ ಎಲ್ಲಿಲ್ಲದ ಸಂತಸ ಮನೆ ಮಾಡಿತು.



**ಕೇಸರಿ ಕುತ್ತಿಗೆಯ ಹಸಿರು ಪಾರಿವಾಳದ ಜೋಡಿ...ಕಿದೂರು ಪಕ್ಷಿ ಗ್ರಾಮದಿಂದ...**

ಚಿತ್ರ ಕೃಪೆ: ರಾಜು ಕಿದೂರು

ಕೇಸರಿ ಕುತ್ತಿಗೆಯ ಹಸಿರು ಪಾರಿವಾಳ ವೈಜ್ಞಾನಿಕವಾಗಿ ಟ್ರೆರೋನ್ ಬಿಸಿಕ್ಟಸ್ ಎಂಬ ಹೆಸರಿನ ಬಾನಾಡಿಯನ್ನು ಗ್ರಾಮೀಣ ಪ್ರದೇಶದಲ್ಲಿ ನಿರೀಕ್ಷಣೆ ಮಾಡಿದ್ದು ವಿಶೇಷವೆನಿಸಿತು.

ಹೌದು, ಅತ್ಯಂತ ಅಪರೂಪವಾದ ಈ ದೃಶ್ಯವನ್ನು ಬಹಳ ಹತ್ತಿರದಿಂದ ಕ್ಯಾಮರಾ ಕಣ್ಣಲ್ಲಿ ಸೆರೆಹಿಡಿಯುವ ಸೌಭಾಗ್ಯ ನಮಗಿರಲಿಲ್ಲ. ತತ್ಪರಿಣಾಮವಾಗಿ ಹಕ್ಕಿಯ ಇರುವಿಕೆಯ ಸೀನರಿಯ ಪೆನ್ಸಿಲ್ ಡ್ರಾಯಿಂಗ್ ಒಂದು ಸಿದ್ಧವಾಯಿತು. ಹಕ್ಕಿಗಳ ನಿರೀಕ್ಷಣೆಯ ದಾಖಲಾತಿಗೆ ಮಾತ್ರವೇ ಸೀಮಿತವಾಗಿರುವ ಅಂತಾರಾಷ್ಟ್ರೀಯ ವೆಬ್ ಜಾಲ ಇ ಬರ್ಡ್ ನಲ್ಲಿ ಪಕ್ಷಿಯ ಡ್ರಾಯಿಂಗ್ ಸಹಿತ ಮಾಹಿತಿ ಅಪ್ಲೋಡ್ ಆಯಿತು.

ದಟ್ಟ ಕಾಡುವಾಸಿಯಾದ ಈ ಅಪರೂಪದ ಹಕ್ಕಿ ಗ್ರಾಮದಲ್ಲೂ ಕಂಡುಬರುತ್ತವೆ ಎಂಬುವುದು ಜಿಲ್ಲೆಯಲ್ಲಿ, ರಾಜ್ಯದಲ್ಲಿ ಪ್ರಚಾರವಾಗಲು ಬೇರೆ ಯಾವುದೇ ಮಾಧ್ಯಮದ ಸಹಾಯ ಬೇಕೆನಿಸಲಿಲ್ಲ. ಇ ಬರ್ಡ್ ಅಂಕಿ ಅಂಶವೇ ಮೌನ ಪ್ರಚಾರ ನೀಡಿತು.!

ಕೆಲವೇ ದಿನಗಳಲ್ಲಿ ಹಲವಾರು ಪ್ರಸಿಧ್ಧ ಕಂಪೆನಿಗಳ ಕ್ಯಾಮರಾ ಹೊಂದಿರುವ ಪಕ್ಷಿ ನಿರೀಕ್ಷಕರು ಕಿದೂರಿನಲ್ಲಿ ಬೀಡು ಬಿಟ್ಟರು.



ಸಾಮಾನ್ಯ ನಾಗರಿಕರಿಗೂ ಕೇಸರಿ ಕುತ್ತಿಗೆಯ ಹಸಿರು ಪಾರಿವಾಳಗಳನ್ನು ನೋಡುವುದೆಂದರೆ ಅದೇನೋ ಖುಷಿ..
ಚಿತ್ರ ಕೃಪೆ: ರಾಜು ಕಿದೂರು

ಬೆಳ್ಳಂ ಬೆಳಗ್ಗೆ ತಲುಪಿ, ಚಾ ತಿಂಡಿ ಊಟ ಸಿಗದ ಈ ಗ್ರಾಮದಲ್ಲಿ ಊರವರು ನೀಡಿದ ಫಲಹಾರವನ್ನು ಸ್ವೀಕರಿಸಿಕೊಂಡು ಹಲವು ಪಟಗಳನ್ನು, ವೀಡಿಯೋಗಳನ್ನು ಚಿತ್ರೀಕರಿಸಿಕೊಂಡರು. ವಿವಿಧ ಬರಹಗಳು ಮೂಡಿಬಂದವು.

ಕೇಸರಿ ಕುತ್ತಿಗೆಯ ಹಸಿರು ಪಾರಿವಾಳಗಳ ಇರುವಿಕೆ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಯಿತು.



**ಹಸಿರೆಲೆಗಳೆಡೆಯಲ್ಲಿ ಅವಿತು ಕೊಂಡರೆ ನಾನು ಅಷ್ಟು ಸುಲಭವಾಗಿ ಕಾಣಲಾರೆನು..**
ಚಿತ್ರ ಕೃಪೆ: ರಾಜು ಕಿದೂರು

ಇದುವೇ 2017ಕ್ಕೆ ಸಾಮಾನ್ಯ ನಾಗರಿಕರನ್ನು ಸೇರಿಸಿಕೊಂಡು ಕೇರಳದಲ್ಲಿ ಮೊತ್ತಮೊದಲಾಗಿ ಬರ್ಡ್ ಫೆಸ್ಟ್ ಒಂದನ್ನು ನಡೆಸಲು ಕಿದೂರು ಗ್ರಾಮ ಪ್ರೇರಣೆಯಾಯಿತು.

ಕೇಸರಿ ಕುತ್ತಿಗೆಯ ಹಸಿರು ಪಾರಿವಾಳಗಳು ವಲಸೆ ಹಕ್ಕಿಗಳಲ್ಲ. ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ, ಈಶಾನ್ಯ ಭಾರತದ ವಿವಿದೆಡೆಗಳಲ್ಲಿ ಮಾತ್ರವಲ್ಲದೆ ಶ್ರೀಲಂಕಾ, ಇಂಡೋನೇಷ್ಯಾ, ಬಾಂಗ್ಲಾದೇಶ, ಮ್ಯಾನ್ಮಾರ್ ಗಳಲ್ಲಿ ವರ್ಷವಿಡೀ ಕಂಡುಬರುತ್ತವೆ.

ಕಾಡು ಹಣ್ಣುಗಳನ್ನು ಹೆಚ್ಚಾಗಿ ಇಷ್ಟಪಡುವುದರಿಂದಲೇ ಇವುಗಳು ಕಾಂಡಂಚಿನ ಗ್ರಾಮಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಹೊಟ್ಟೆ ತುಂಬಿದ ನಂತರ ಸೂರ್ಯನ ಬಿಸಿಲು ಸಿಗಲು ಎತ್ತರದ ಮರ-ಗಿಡಗಳಲ್ಲಿ ರೆಸ್ಟ್ ತೆಗೆದುಕೊಳ್ಳುತ್ತವೆ. ಈ ಕಾರಣದಿಂದಲೇ ಕಿದೂರು ಪಕ್ಷಿ ಗ್ರಾಮದಲ್ಲಿರುವ ಎಲ್ಲರೂ ಈ ವಿಶಿಷ್ಟ ಪಕ್ಷಿಯನ್ನು ಕಣ್ಣಾರೆ ಕಂಡುಕೊಳ್ಳುವ ಸೌಭಾಗ್ಯವನ್ನು ಪಡೆದಿದ್ದಾರೆ.

ಹೆಚ್ಚಾಗಿ ಮುಳ್ಳುಗಳಿಂದ ಕೂಡಿದ ಮರುವ ಮರ ಹಾಗೂ ಕನ್ವಟಿ ಎಂದು ಗ್ರಾಮೀಣರು ಹೇಳುವ ಮೃದು ಸಸ್ಯದ ಹಣ್ಣುಗಳನ್ನು ಇಷ್ಟಪಟ್ಟು ತಿನ್ನುವುದನ್ನು ಇಲ್ಲಿನ ನಾಗರಿಕರು ಗಮನಿಸಿ ಪಕ್ಷಿ ಮಿತ್ರರಿಗೆ ಹಕ್ಕಿಗಳ ಇರುವಿಕೆಯನ್ನು ಖಾತರಿ ಪಡಿಸುತ್ತಾರೆ.ಇದು ಇಲ್ಲಿಗೆ ಭೇಟಿ ನೀಡುವ ಹಲವಾರು ಪಕ್ಷಿ ನಿರೀಕ್ಷಕರಿಗೆ ಪ್ರಯೋಜನಕಾರಿಯಾಗಿದ್ದು ನಾಗರಿಕರೇ ಲೋಕಲ್ ಗೈಡ್ ಆಗಿರುವುದು ವಿಶೇಷವೆನಿಸಿದೆ.

**ಕೇಸರಿ ಕುತ್ತಿಗೆಯ ಹಸಿರು ಪಾರಿವಾಳಗಳು**

ಆಕಾರ ಮತ್ತು ಗಾತ್ರ ಸಾಮಾನ್ಯ ಪಾರಿವಾಳದ್ದು. ಹೆಣ್ಣು ಚಿಕ್ಕದು ಗಂಡು ಸ್ವಲ್ಪ ದೊಡ್ಡದು. ಶರೀರ ಪೂರ್ತಿ ಹಸಿರು. ಗಂಡಿನ ಕುತ್ತಿಗೆಯ ಭಾಗದಲ್ಲಿ ಕೇಸರಿ ಎದ್ದು ಕಾಣುವುದು. ಎಡೆಯಲ್ಲಿ ಪಿಂಕ್ ಸಹ ಕೇಸರಿಗೆ ಸಾಥ್ ನೀಡುವುದು. ಕಾಲುಗಳು, ಬೆರಳುಗಳು ಎಲ್ಲವೂ ಲೈಟ್ ಪಿಂಕು. ಇವುಗಳು ಕೇಸರಿ ಕುತ್ತಿಗೆಯ ಹಸಿರು ಪಾರಿವಾಳದ ಶಾರೀರಕ ವೈಶಿಷ್ಟ್ಯಗಳು.



**ಎತ್ತರದ ಮರದಲ್ಲಿ ಸೂರ್ಯನ ಬಿಸಿಲಿಗೆ ಮೈಯೊಡ್ಡಿ ಕುಳಿತುಕೊಂಡ ಜೋಡಿ ಹಕ್ಕಿಗಳು**.

ಚಿತ್ರ ಕೃಪೆ: ರಾಜು ಕಿದೂರು

ಈ ಪಾರಿವಾಳಗಳ ಜೊತೆಗೆ ಸಾಮಾನ್ಯ ಹಸಿರು ಪಾರಿವಾಳಗಳ ಗುಂಪೂ ಕಂಡು ಬರುವವು. ಅದರೆ ಕೇಸರಿ ಕುತ್ತಿಗೆಯನ್ನು ಕಂಡಕೂಡಲೇ ನಮಗೆ ಅದೇನೋ ಖುಷಿ ಪಡಬಹುದು. ಯಾಕೆಂದರೆ ಇದು ಎಲ್ಲಾ ಕಡೆಗಳಲ್ಲಿ ಕಣ್ಣಿಗೆ ಕಾಣಸಿಗುವುದು ಬಹಳ ಅಪರೂಪವೆಂಬುವುದನ್ನು ಒಪ್ಪಿಕೊಳ್ಳಲೇಬೇಕು.

::::::::::::::::::::::::::::::::::::::::::::::::

**ರಾಜು ಕಿದೂರು**

**ಅಧ್ಯಾಪಕರು**

**ಹೋಲಿ ಫ್ಯಾಮಿಲಿ ಅನುದಾನಿತ ಶಾಲೆ,**

**ಕುಂಬಳೆ, ಕೇರಳ**

**ಇಮೇಲ್: rajukidoor@gmail.com**